***ಪ್ರಾಸಾಃ 8 ಚಾಸಾಃ 11***

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ. ದಂ. ನ್ಯಾಯಾಲಯ, ಬಳ್ಳಾರಿ.**

| | |
|---|---|
| ***ಹೆಸರು*** | ಶ್ರೀ. ಬಿ. ಎಂ. ಗುರುಮೂರ್ತಿ |
| ***ತಂದೆಯ ಹೆಸರು*** | ಶ್ರೀ. ಬಿ ಎಂ ಸಿದ್ದಲಿಂಗಯ್ಯ |
| ***ವಯಸ್ಸು*** | 67 ವರ್ಷ |
| ***ವೃತ್ತಿ*** | ನಿವೃತ್ತ ಶಿಕ್ಷಕ |
| ***ವಿಳಾಸ*** | ಶ್ರೀಧರಗಡ್ಡೆ, ಬಳ್ಳಾರಿ |

**ದಿನಾಂಕಃ 13-01-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದ**

1. ಚಾಸಾ 1 ರಿಂದ 4 ಗೊತ್ತು. ಈ ಪ್ರಕರಣದ 1 ರಿಂದ 6 ನೇ ಆರೋಪಿತರು ಗೊತ್ತು.

2. ಚಾಸಾ 1 ಮತ್ತು ಆರೋಪಿಯ ಮದುವೆಯು ಮಂಡರಿಗೆಯಲ್ಲಿ ದಿಃ 29-04-2007 ರಂದು ಆಗಿರುತ್ತದೆ. ಮದುವೆ ಸಂದರ್ಭದಲ್ಲಿ ವರೋಪಚಾರ ವರದಕ್ಷಣೆಯನ್ನು ಚಾಸಾ 1 ರವರ ಕಡೆಯಿಂದ 1 ನೇ ಆರೋಪಿಗೆ ನೀಡಿರುತ್ತಾರೆ. 1 ನೇ ಆರೋಪಿಗೆ ಒಂದು ವಾಚ್, ಬಂಗಾರದ ಉಂಗುರ, ಬಂಗಾರದ ಚೈನು, 1 ಲಕ್ಷ ರೂಪಾಯಿ ವರದಕ್ಷಣೆಯನ್ನು ಕೊಟ್ಟಿರುತ್ತಾರೆ. ಮದುವೆಯಾದ ನಂತರ ಚಾಸಾ 1 ರವರನ್ನು 1 ನೇ ಆರೋಪಿಯವರ ಮನೆಗೆ ಕರೆದುಕೊಂಡು ಬಂದಿರುತ್ತಾರೆ. ಮದುವೆಯಾದ ಒಂದು ವರ್ಷದವರೆಗೆ 1 ನೇ ಆರೊಪಿ ಮತ್ತು ಚಾಸಾ 1 ರವರು ಚೆನ್ನಾಗಿದ್ದರು. ಚಾಸಾ 1 ರವರು ಗರ್ಭವತಿಯಾದ ನಂತರ ಸದರಿಯವನ್ನು ಸದರಿಯವರ ತವರುಮನೆಗೆ ಕಳುಹಿಸಿಕೊಟ್ಟಿರುತ್ತಾರೆ. ಚಾಸಾ 1 ರವರು ಹೆರಿಗೆಯಾದ ನಂತರ 1 ನೇ ಆರೋಪಿಯ ಮನೆಗೆ ಬಂದಿರುತ್ತಾರೆ. ಚಾಸಾ 1 ರವರು ಹೆರಿಗೆಯಾಗಿ 1 ನೇ ಆರೋಪಿಯ ಮನೆಗೆ ಬರುವದರೋಳಗೆ 1 ನೇ ಆರೋಪಿ ಯು ತಬಸುಮ್ (6 ನೇ ಆರೋಪಿ)ಯೊಂದಿಗೆ ಸಂಬಂಧ ಬೆಳೆಸಿರುತ್ತಾರೆ.

3. ತದನಂತರ ಚಾಸಾ 1 ರವರಿಗೆ 1 ನೆ ಆರೋಪಿ ಕಿರುಕುಳ ಕೊಡಲು ಪ್ರಾರಂಭಿಸಿರುತ್ತಾರೆ. ಚಾಸಾ 1 ರವರು 1 ನೇ ಆರೋಪಿಯ ಮನೆಯಲ್ಲಿದ್ದರೂ ಸದರಿ 6 ನೇ ಆರೋಪಿ 1 ನೇ ಆರೋಪಿಯ ಮನೆಗೆ ಬರುವುದು ಹೋಗುವುದು ಮಾಡುತಿದ್ದರು. ಚಾಸಾ 1 ರವರು 6 ನೇ ಆರೋಪಿಯನ್ನು 1 ನೇ ಆರೋಪಿಯ ಮನೆಗೆ ಬರದೇ ಇರುವಂತೆ ತಡೆ ಮಾಡಲು ಪ್ರಯತ್ನ ಪಟ್ಟಿರುತ್ತಾರೆ. ಆ ಕಾರಣಕ್ಕೆ ಸದರಿ 3 ವ್ಯಕ್ತಿಗಳ ನಡುವೆ ಜಗಳವಾಗಿ ಚಾಸಾ 1 ರವರಿಗೆ ಹೆಚ್ಚಿನ ಕಿರುಕುಳ ನೀಡಲು ಪ್ರಾರಂಭಿಸಿರುತ್ತಾರೆ. ಚಾಸಾ 1 ರವರು ತನ್ನ ತಂದೆ ತಾಯಿ ಮತ್ತು ಅಣ್ಣ ರವರಿಗೆ ಸದರಿ ವಿಚಾರವನ್ನು ಹೇಳಿರುತ್ತಾರೆ. 1 ನೇ ಆರೋಪಿ ಚಾಸಾ 1 ರವರ ತಂದೆ ತಾಯಿ ಮತ್ತು ಅಣ್ಣ ನ ಮಾತನ್ನು ಕೇಳಿರುವುದಿಲ್ಲ. 1 ನೇ ಆರೋಪಿ ಚಾಸಾ 1 ರವರ ತಂದೆ ತಾಯಿ ಮತ್ತು ತಮ್ಮ ಮತ್ತು ತಮ್ಮನ ಹೆಂಡತಿಯನ್ನು 1 ನೇ ಆರೋಪಿಯ ಮನೆಗೆ ಕರೆಸಿರುತ್ತಾರೆ. ಈ ಬಗ್ಗೆ ಸದರಿಯವರ ನಡುವೆ ಮತ್ತು ಆರೋಪಿಗಳ ನಡುವೆ ಮಾತುಕತೆಯಾಗಿ 1 ನೇ ಆರೋಪಿ ಹಾಗೂ ಅವರ ತಂದೆ ತಾಯಿ, ಈಗಾಗಲೇ 1 ನೇ ಆರೋಪಿಯೊಂದಿಗೆ ಮದುವೆಯಾಗಿದ್ದು , 6 ನೇ ಆರೋಪಿಯನ್ನು 1 ನೇ ಆರೋಪಿ ಬಿಡಲಾಗುವುದಿಲ್ಲ ಎಂದು ಹಾಗೂ ಈ ಬಗ್ಗೆ ಚಾಸಾ 1 ರವರು ಸಹಕರಿಸಿ ಜೀವನ ಮಾಡಬೇಕೆಂದು ಹೇಳಿರುತ್ತಾರೆ.

4. 1 ನೇ ಆರೋಪಿ ಹಾಗೂ ಅವರ ತಂದೆ ತಾಯಿ ಚಾಸಾ 1 ರವರನ್ನು ಉದ್ದೇಶಿಸಿ ಚಾಸಾ 1 ರವರ ಮಗನನ್ನು ಆರೋಪಿಗೆ ನೀಡಿ ಚಾಸಾ 1 ರವರು ಎಲ್ಲಿಬೇಕಾದರು ಹೋಗಿ ಇರು ಎಂದು ವಾಗ್ವಾದ ಮಾಡಿರುತ್ತಾರೆ. ಈ ಸಂದರ್ಬದಲ್ಲಿ 1 ನೇ ಆರೋಪಿಯ ತಂದೆ ತಾಯಿ ಹಾಗೂ 6 ನೇ ಆರೋಪಿ ಚಾಸಾ 1 ರವರ ಮಗನನ್ನು ಕಸಿದುಕೊಳ್ಳಲು ಹೋದಾಗ ಆರೋಪಿತರು ಬಡೆಯುತ್ತೇನೆ ಎಂದು ಚಾಸಾ 1 ರವರಿಗೆ ಹೇಳಿ ಕೈ ಎತ್ತಿದಾಗ ನಾನು ತಡೆಯಲು ಹೋಗಿ ಚಾಸಾ 1 ರವರಿಗೆ ಎಟು ಬೀಳುವುದನ್ನು ತಪ್ಪಿಸಿರುತ್ತೇನೆ ಆ ಕಾರಣ ನನಗೆ ಎಟು ಬಿದ್ದಿರುತ್ತದೆ. ಆರೋಪಿ 1 ಮತ್ತು ಚಾಸಾ 1 ರವರ ನಡುವೆ ಸರಿಹೋಗುವುದಿಲ್ಲ ಎಂದು ಹೇಳಿ ವಾಪಸು ಬಂದಿರುತ್ತೇನೆ. ಈ ಬಗ್ಗೆ ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ. 1 ನೇ ಆರೋಪಿಯನ್ನು ನೋಡಿರುತ್ತೇನೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ. ಉಳಿದ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

**(ಆರೋಪಿ ಪರ ಮಾನ್ಯ ವಕೀಲರು ಇತರ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದ ಕಾರಣ ವಿನಾಯತಿ ಅರ್ಜಿಯನ್ನು ಅಂಗೀಕರಿಸಲಾಯಿತು.)**

**ಪಾಟಿ ಸವಾಲುಃ ಆರೋಪಿತರ ಪರ ಮಾನ್ಯ ಎ ಎಂ ಬಿ ವಕೀಲರಿಂದಃ**

5. ನಾನು ಖಾಯಂಆಗಿ ಶ್ರೀಧರಗಡ್ಡೆಯ ವಾಸಿ ಯಾಗಿರುತ್ತೇನೆ. ಚಾಸಾ 1 ರವರು ನನಗೆ ಸಂಬಂಧದಲ್ಲಿ ಸೊಸೆಯಾಗಬೇಕು. ಪಿ.ಜಿ. ಹಿರೆಮಠ್ ಎಂಬ ವಕೀಲರು ನನಗೆ ಸಂಬಂಧಿಯಾಗಬೇಕು ಎಂದರೆ ನಿಜ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಖಾಸಗಿ ಪಿರ್ಯಾದಿ ಮತ್ತು ಪೊಲೀಸ್ ಠಾಣೆಗೆ ದೂರನ್ನು ನಾನು ಮತ್ತು ಸದರಿ ಪಿ.ಜಿ. ಹಿರೆಮಠ್ ಎಂಬ ವಕೀಲರು ನೀಡಿರುತ್ತೇವೆ ಎಂದರೆ ನಾನು ದೂರು ನೀಡಿರುವುದಿಲ್ಲ ಹಾಗೂ ಪಿ.ಜಿ. ಹಿರೆಮಠ್ ಎಂಬುವವರು ದೂರು ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ 1 ರವರು ಮತ್ತು 1 ನೇ ಆರೋಪಿ ಮದುವೆಗೆ ಮೊದಲೇ ಸಂಬಂಧಿಕರು ಎಂದರೆ ನಿಜ. ಚಾಸಾ 1 ಮತ್ತು 1 ನೇ ಆರೋಪಿಯ ಮದುವೆಯ ಮಾತುಕತೆಗೆ ನಾನು ಇರಲಿಲ್ಲ. ಚಾಸಾ 1 ಮತ್ತು 1 ನೇ ಆರೋಪಿಯ ರವರ ಮದೆಯ ಖರ್ಚನ್ನು 1 ನೇ ಆರೋಪಿ ಮಾಡಿರುತ್ತಾರೆ ಎಂದರೆ ಸುಳ್ಳು. 1 ನೇ ಆರೋಪಿ ಹಾಗೂ ಚಾಸಾ 1 ರವರು ಸಂಬಂಧಿಕರಾದ ಕಾರಣ 1 ನೇ ಆರೋಪಿ ಚಾಸಾ 1 ರವರ ಕಡೆಯಿಂದ ಯಾವುದೇ ವರದಕ್ಷಣೆ ಪಡೆದಿರುವುದಿಲ್ಲ ಎಂದರೆ ಸುಳ್ಳು.

6. 1 ನೇ ಆರೋಪಿಗೆ ಒಂದು ವಾಚ್, ಬಂಗಾರದ ಉಂಗುರ, ಬಂಗಾರದ ಚೈನು, 1 ಲಕ್ಷ ರೂಪಾಯಿ ವರದಕ್ಷಣೆಯಾಗಿ ಚಾಸಾ 1 ರವರ ಕಡೆಯಿಂದ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು 2008 ರ 3 ನೇ ತಿಂಗಳಲ್ಲಿ ತವರುಮನೆಗೆ ಹೆರಿಗೆಗಾಗಿ ಹೋಗಿರುತ್ತಾರೆ. ಚಾಸಾ 1 ರವರು ಹೆರಿಗೆಯಾದ 3 ತಿಂಗಳ ನಂತರ 1 ನೇ ಆರೋಪಿಯ ಮನೆಗೆ ಬಂದಿರುತ್ತಾರೆ. 6 ನೇ ಆರೋಪಿ 1 ನೇ ಆರೋಪಿಯ ಮನೆಗೆ ಬಂದುಹೋಗುವುದನ್ನು ನಾನು ನೋಡಿರುವುದಿಲ್ಲ. ನಾನು 1, 6 ನೇ ಆರೋಪಿತರು ಮತ್ತು ಚಾಸಾ 1 ರವರು ಯಾವಗ ಗಲಾಟೆ ಮಾಡಿರುತ್ತಾರೆ ಎಂದು ನನ್ನ ಹೇಳಿಕೆ ಯಲ್ಲಿ ಹೇಳಿರುವುದಿಲ್ಲ. ಆರೋಪಿ ಶಿವರುದ್ರಯ್ಯ ಮತ್ತು ಶೈಲಜಾ ಎಂಬುವವರು ಗದಗಿನಲ್ಲಿ ವಾಸಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಪಿ.ಜಿ.ಹಿರೆಮಠ್ ಮತ್ತು ಶಾಂತಮ್ಮ ಎಂಬುವವರು ಬೂದಿಹಾಳ್ ನಲ್ಲಿ ವಾಸವಾಗಿದ್ದರು ಎಂದರೆ ನಿಜ.

7. 6 ನೇ ಆರೋಪಿಗೆ ತನ್ವೀರ್ ಎಂಬ ವ್ಯಕ್ತಿಯೊಂದಿಗೆ 2008 ನೇ ಇಸವಿಯಲ್ಲಿ ಮದುವೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 6 ನೇ ಆರೋಪಿ ತನ್ವೀರ್

***ಪ್ರಾಸಾಃ 8 ಚಾಸಾಃ 11***

ಎಂಬುವವರೊಂದಿಗೆ ಮದುವೆಯಾದ ವಿಚಾರ ನಾನು ತಿಳಿದುಕೊಂಡಿಲ್ಲ. 2008 ಮಾರ್ಚ್ ನಲ್ಲಿ 1 ನೇ ಆರೋಪಿ 6 ನೇ ಆರೋಪಿಯನ್ನು ಮದುವೆಯಾದ ಬಗ್ಗೆ ಚಾಸಾ 1 ಮತ್ತು ಅವರ ತಾಯಿ ಮತ್ತು ಅವರ ತಮ್ಮ ನನಗೆ ತಿಳಿಸಿರುತ್ತಾರೆ. 2008 ನೇ ಇಸವಿಯಲ್ಲಿ ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿರುವುದಿಲ್ಲ. ನಾನು ಮುಂದುವರೆದು ಹೇಳುವುದೇನೆಂದೆ ಇಬ್ಬರು ಸಂಬಂಧಿಕರಾಗಿರುವುದರಿಂದ ಮಾತನಾಡಿ ಸರಿಮಾಡಲು ಪ್ರಯತ್ನ ಪಟ್ಟಿರುತ್ತೇವೆ. 1 ನೇ ಆರೋಪಿ 6 ನೇ ಆರೋಪಿಯನ್ನು ಮದುವೆಯಾಗದೇ ಇರುವ ಕಾರಣ ನಾವು ದೂರು ಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ದಿಃ 11-04-2010 ರಂದು ಚಾಸಾ 1 ರವರ ತಂದೆ, ತಾಯಿ, ತಮ್ಮ ಮತ್ತು ತಮ್ಮನ ಹೆಂಡತಿಯನ್ನು 1 ನೇ ಆರೋಪಿಯ ಮನೆಗೆ ಕರೆಸಿರುತ್ತಾರೆ. ಸದರಿ ಕಾಲಕ್ಕೆ ಆರೋಪಿ, ಆರೋಪಿಯ ತಂದೆ ತಾಯಿ ನಾನು, ಅನ್ವರ್ ಬಾಷಾ, ಶಿವಾಚಾರಿ, ಮಹಾಲಿಂಗಯ್ಯ ಎಂಬುವವರು ಇದ್ದರು. ದಿಃ 11-4-2010 ರಂದು ಯಾವುದೇ ಪಂಚಾಯತಿ ಆಗಿರುವುದಿಲ್ಲ ಹಾಗೂ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸುಳ್ಳು. 6 ನೇ ಆರೋಪಿ ಚಾಸಾ 1 ರವರ ಮಗನನ್ನು ಕಸಿದುಕೊಳ್ಳಲು ಹೋಗಿರುವುದಿಲ್ಲ ಎಂದರೆ ಸುಳ್ಳು. ನಾನು ಸದರಿ ಕಾಲಕ್ಕೆ ಗಲಾಟೆಯನ್ನು ಬಿಡಿಸಲು ಅಡ್ಡ ಹೋದಾಗ ನನಗೆ ಏಟು ಬಿತ್ತು ಎಂಬ ವಿಚಾರ ಸತ್ಯಕ್ಕೆ ದೂರವಾಗಿರುತ್ತದೆ ಎಂದರೆ ಸುಳ್ಳು.

8. ಚಾಸಾ 1 ರವರು 1 ನೇ ಆರೋ ಪಿಯನ್ನು ಬಿಟ್ಟು ಹೋಗಿರುತ್ತಾರೆ ಎಂದರೆ ಸುಳ್ಳು. ಚಾಸಾ 1 ರವರು 1 ನೇ ಆರೋಪಿಯೊಂದಿಗೆ ಇರಲು ಆಗದೇ ಇರುವ ಕಾರಣ ಸದರಿಯವರ ನಡುವೆ ವಿವಾಹ ವಿಚ್ಛೇದನವಾಗಿರುತ್ತದೆ ಎಂದರೆ ಸುಳ್ಳು. ನಾನು ಚಾಸಾ 1 ರವರ ಸಂಬಂಧಿಯಾಗಿರುವುದರಿಂದ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ ಎಂದು ನುಡಿದಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಬಳ್ಳಾರಿ.**

***ಪ್ರಾಸಾಃ 8 ಚಾಸಾಃ 11***